ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು –54**

**ಪಟ್ಟಿ – ೨೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೨೩ನೇ ಜುಲೈ, ೨೦೧೪**

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಸರ್ಕಾರಿ ಒತ್ತುವರಿ ಜಮೀನನ್ನು ವಶಕ್ಕೆ ಪಡೆಯುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೧ (೧೭೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದಿಂದ ನೇಮಿಸಲ್ಪಟ್ಟ ವಿವಿಧ ಸಮಿತಿಗಳು ರಾಜ್ಯದಲ್ಲಿ ಸರ್ಕಾರಿ ಜಮೀನಿನ ಒತ್ತುವರಿ ಆಗಿರುವ ಬಗ್ಗೆ ವರದಿ ನೀಡಿರುವುದು ನಿಜವಲ್ಲವೆ ;

(ಆ) ಇದ್ದಲ್ಲಿ, ಒಟ್ಟು ಎಷ್ಟು ಸರ್ಕಾರಿ ಜಮೀನು ಒತ್ತುವರಿಯಾಗಿದೆ ; ಜಿಲ್ಲಾವಾರು ಅಂತಹ ಒತ್ತುವರಿಯ ಒಟ್ಟು ವಿಸ್ತೀರ್ಣದ ವಿವರವನ್ನು ತಿಳಿಸುವುದು ;

(ಇ) ಅಂತಹ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ತೆರವುಗೊಳಿಸಿದ ಸರ್ಕಾರಿ ಜಮೀನಿನ ಉಪಯೋಗಕ್ಕೆ ಸರ್ಕಾರದ ಯೋಜನೆಗಳೇನು ?

## ಭೂ ಪರಿವರ್ತನೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೨ (೧೫೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿವಿಧ ಉದ್ದೇಶಗಳಿಗೆ ಭೂ ಪರಿವರ್ತನೆಯನ್ನು ಸರ್ಕಾರ ಮಾಡಿರುವುದು ನಿಜವಲ್ಲವೇ ;

(ಆ) ಹಾಗಿದ್ದರೆ, ಕಳೆದ ಎರಡು ವರ್ಷಗಳಲ್ಲಿ (ಮೇ ತಿಂಗಳು ೨೦೧೪ರವರೆಗೆ) ಭೂ ಪರಿವರ್ತನೆ ಮಾಡಿರುವುದು ಎಷ್ಟು ; (ಭೂ ಪರಿವರ್ತನೆ ಪಡೆದವರ ವಿಳಾಸ, ವಿಸ್ತೀರ್ಣ ಭೂ ಪರಿವರ್ತನೆ ಉದ್ದೇಶ ಮತ್ತು ದಿನಾಂಕ, ವಿವರಗಳನ್ನು ಬೆಂಗಳೂರು

ನಗರ, ಗ್ರಾಮಾಂತರ ಮತ್ತು ಇತರೆ ಜಿಲ್ಲೆಗಳ ಪೂರ್ಣ ವಿವರ ನೀಡುವುದು) ?

## ಅಂತರ್ಜಲದಲ್ಲಿ ಕುಸಿತ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೩ (೧೭೯೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಂತರ್ಜಲ ದಿನೇ ದಿನೇ ಕುಸಿಯುತ್ತಿರುವುದು ನಿಜವೇ ;

(ಆ) ಇದ್ದಲ್ಲಿ, ಅಂತರ್ಜಲ ವೃದ್ಧಿಗೆ ಸರ್ಕಾರದ ಯೋಜನೆಗಳೇನು ;

(ಇ) ಆ ಉದ್ದೇಶ ಸಫಲತೆಗೆ ಮತ್ತು ಇತರೆ ಕಾಮಗಾರಿಗಳ ಪೂರೈಕೆಗೆ ೨೦೧೪–೧೫ನೇ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಮೀಸಲಿಟ್ಟ ಹಣದ ಒಟ್ಟು ಮೊತ್ತ ಎಷ್ಟು ?

## ತುಗಚಿ ಬಬಲೇಶ್ವರ ಏತ ನೀರಾವರಿ ಯೋಜನೆ

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೩೪ (೧೭೯೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ವ್ಯಾಪ್ತಿಗೆ ಬರುವ ತುಗಚಿ ಬಬಲೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆ ಅಥಣಿ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ಒಳಪಡಲಿದೆ ;

(ಇ) ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಎಷ್ಟು ತಾಲ್ಲೂಕಿನ ಗ್ರಾಮಗಳಿಗೆ ಹಾಗೂ ಯಾವ ಯಾವ ಗ್ರಾಮಗಳಿಗೆ ಈ ಯೋಜನೆ ಒಳಪಡಲಿದೆ ; ಈ ಯೋಜನೆಯಲ್ಲಿ ನೀರಾವರಿಗೆ ಒಳಪಡುವ ಕ್ಷೇತ್ರ ಎಷ್ಟು ; ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು; ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

## ಹಿರಣ್ಯಕೇಶಿ ನದಿಗೆ ಸಂಗಮ ಬ್ಯಾರೇಜ್ ನಿರ್ಮಾಣ

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೩೫ (೧೭೫೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿರಣ್ಯಕೇಶಿ ನದಿಗೆ ಸಂಗಮ ಬ್ಯಾರೇಜ್ ನಿರ್ಮಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

(ಇ) ಈ ಯೋಜನೆಯಿಂದ ನೀರಾವರಿಗೆ ಒಳಪಡುವ ಕ್ಷೇತ್ರ ಎಷ್ಟು (ವಿವರಣೆ ನೀಡುವುದು) ;

(ಈ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ;

(ಉ) ಈ ಕಾಮಗಾರಿ ಪ್ರಾರಂಭ ವಿಳಂಬವಾಗಿರಲು ಕಾರಣಗಳು ಏನು ?

## ಬಸವೇಶ್ವರ ಏತ ನೀರಾವರಿ ಯೋಜನೆ

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೩೬ (೧೭೯೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಬಸವೇಶ್ವರ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ; ಹಾಗಿದ್ದಲ್ಲಿ, ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

(ಆ) ಈ ಯೋಜನೆಯಿಂದ ನೀರಾವರಿಗೆ ಒಳಪಡುವ ಹಳ್ಳಿಗಳು ಯಾವುವು ; ನೀರಾವರಿಗೆ ಒಳಪಡುವ ಕ್ಷೇತ್ರ ಎಷ್ಟು ;

(ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ; ಯಾವಾಗ ಪೂರ್ಣಗೊಳಿಸಲಾಗುವುದು ;

(ಈ) ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ವಿಳಂಬವಾಗಲು ಕಾರಣಗಳು ಏನು ?

## ನೀರಗಂಟಿಯವರ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೩೭ (೧೭೯೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ನೀರಗಂಟಿ ಎಂಬ ಪದನಾಮ ಇದೆಯೇ ; ಇದ್ದರೆ, ಈ ನೀರಗಂಟಿಯ ಕಾರ್ಯವ್ಯಾಪ್ತಿ ಏನು ;

(ಆ) ನೀರಗಂಟಿ ಪದನಾಮ ಇಲ್ಲದೇ ಇರುವುದರಿಂದ ಕೆರೆ, ಕಟ್ಟೆ, ತೂಗು ಹಾಗೂ ರಾಜಕಾಲುವೆ ನಿರ್ವಹಣೆ ಸಂಪೂರ್ಣ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪುನಃ ಈ ಕೆರೆಗಳನ್ನು ರಕ್ಷಣೆ ಮಾಡಲು/ಸುಸ್ಥಿತಿಯಲ್ಲಿಡಲು ರೈತರ ಜಮೀನಿಗೆ ನೀರು ಹಾಯಿಸಲು ನೀರಗಂಟಿ ಪದ್ಧತಿಯನ್ನು ಸರ್ಕಾರ ಜಾರಿಗೆ ತರಲು ಯೋಚಿಸಿದೆಯೇ ?

## ಕೆರೆಯ ಒತ್ತುವರಿ ತೆರವುಗೊಳಿಸುವುದು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೪೩೮ (೧೭೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಗೆ ಬರುವ ಸಣ್ಣ ನೀರಾವರಿ ಕೆರೆಗಳು ಎಷ್ಟು (ವಿವರಗಳನ್ನು ತಾಲ್ಲೂಕುವಾರು ನೀಡುವುದು) ;

(ಆ) ಪ್ರತಿಯೊಂದು ಕೆರೆಗಳ ವಿಸ್ತೀರ್ಣ ಎಷ್ಟು ಮತ್ತು ಪ್ರತಿ ಕೆರೆಯಲ್ಲಿ ಒತ್ತುವರಿಯಾಗಿರುವ ವಿಸ್ತೀರ್ಣ ಎಷ್ಟು ;

(ಇ) ಪ್ರತಿ ಕೆರೆಯಲ್ಲಿ ಆಗಿರುವ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ವರುಣಾ ನಾಲೆಯಿಂದ ಕೆರೆಗಳಿಗೆ ನೀರು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೩೯ (೧೮೦೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಮತ್ತು ತಿ. ನರಸೀಪುರ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ; ಈ ಕೆರೆಗಳ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಲಾಗಿದೆಯೇ (ಪೂರ್ಣ ವಿವರ ನೀಡುವುದು);

(ಆ) ಈ ಕೆರೆಗಳ ಪೈಕಿ ಎಷ್ಟು ಕೆರೆಗಳಿಗೆ ವರುಣಾ ನಾಲೆಯಿಂದ ನೀರು ತುಂಬಿಸುವ ವ್ಯವಸ್ಥೆ ಮಾಡಲಾಗಿದೆ (ವಿವರ ಒದಗಿಸುವುದು) ?

## ಪಂತ ಬಾಳಿ ಕುಂದರಗಿ ನೂಲಿನ ಗಿರಣಿಯನ್ನು ಪುನರ್ ಪ್ರಾರಂಭಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೪೦ (೧೮೦೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿಯಲ್ಲಿ ಇರುವ ಪಂತಬಾಳೆ ಕುಂದರಗಿ ನೂಲಿನ ಗಿರಣಿ ಮುಚ್ಚಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ನೂಲಿನ ಗಿರಣಿ ಮುಚ್ಚಿದ್ದರಿಂದ ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾದ ಸಂಗತಿ ನಿಜವೇ ;

(ಇ) ಹಾಗಿದ್ದಲ್ಲಿ, ಆ ಮಿಲ್ಲನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಅಲ್ಲಿ ಎಷ್ಟು ಜನರು ನೌಕರಿ ಮಾಡುತ್ತಿದ್ದರು ;

(ಉ) ಈಗ ಆ ಗಿರಣಿ ಪ್ರಾರಂಭಿಸಲು ಇರುವ ತೊಂದರೆಗಳಾದರೂ ಏನು ;

(ಊ) ಪ್ರಾರಂಭಿಸಲು ಎಷ್ಟು ಹಣ ಬೇಕಾಗುವುದು ; ಯಾವ ಹಣಕಾಸಿನ ವ್ಯವಸ್ಥೆ ಮಾಡಲಾಗುವುದು (ವಿವರ ನೀಡುವುದು) ; ಇನ್ನೂ ಎಷ್ಟು ಕೊಡತಕ್ಕದ್ದು ಬಾಕಿ ಇರುತ್ತದೆ (ವಿವರ ನೀಡುವುದು) ?

## ಮುಚ್ಚುವ ಹಂತದಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೪೪೧ (೧೮೦೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಉದ್ಯೋಗ ವಿನಿಮಯ ಕಛೇರಿಗಳಿವೆ ; ಎಲ್ಲೆಲ್ಲಿ ಇರುತ್ತವೆ (ವಿವರ ನೀಡುವುದು) ;

(ಆ) ಆ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಎಷ್ಟು ನಿರುದ್ಯೋಗಿ ವಿದ್ಯಾವಂತ ಯುವಕರು ಹೆಸರು ನೋಂದಾಯಿಸಿದ್ದಾರೆ ; ಅವರಲ್ಲಿ ಪದವೀಧರರು ಎಷ್ಟು ; ಹಾಗೂ ಇತರರು ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ರಾಜ್ಯದ ಎಲ್ಲ ಉದ್ಯೋಗ ವಿನಿಮಯ ಕಛೇರಿಗಳು ಮುಚ್ಚುವ ಹಂತದಲ್ಲಿ ಇರುವ ಸಂಗತಿ ನಿಜವೇ ;

(ಈ) ಬೆಳಗಾವಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಮಂಜೂರಾದ ಹುದ್ದೆಗಳು ಎಷ್ಟು ; ಅಲ್ಲಿ ಎಷ್ಟು ಜನರು ಕಾರ್ಯ ನಿರ್ವಹಿಸುತ್ತಿದ್ದಾರೆ ; ಹಾಗೂ ಎಷ್ಟು ಜನರು ಹೆಸರು ನೋಂದಾಯಿಸಿದ್ದಾರೆ ;

(ಉ) ನಿರುದ್ಯೋಗಿ ಪದವೀಧರರಿಗೆ ಹಾಗೂ ಪದವೀಧರರೇತರರಿಗೆ ನೌಕರಿ ಕೊಡಲು ಯಾವ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ?

## ನೇಕಾರರಿಗೆ ಶೇ.೩ರ ಬಡ್ಡಿ ದರದಲ್ಲಿ ಸಾಲ ನೀಡುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೧೪೪೨ (೧೮೦೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನೇಕಾರರು ಇಂದು ಸಂಕಷ್ಟದಲ್ಲಿ ಇರುವ ಸಂಗತಿ ನಿಜವೇ ;

(ಆ) ಅವರ ಆರ್ಥಿಕ ಸ್ಥಿತಿ ಸುಧಾರಿಸಲು ಸರ್ಕಾರ ಬಡ್ಡಿ ಇಲ್ಲದೆ ಸಾಲ ಕೊಡಲು ಯಾವ ಕ್ರಮ ಕೈಗೊಳ್ಳಲಾಗುವುದು ;

(ಇ) ಸರ್ಕಾರ ನೇಕಾರರಿಗೆ ಪ್ರತಿಶತ ಮೂರರ ಬಡ್ಡಿದರದಲ್ಲಿ ಸಾಲ ಕೊಡುವುದಾಗಿ ಆಶ್ವಾಸನೆ ನೀಡಿದ ಸಂಗತಿ ನಿಜವೇ ;

(ಈ) ಬೆಳಗಾವಿ ಜಿಲ್ಲೆಯಲ್ಲಿ ಬ್ಯಾಂಕಿನವರು ಪ್ರತಿಶತ ಮೂರರ ಬಡ್ಡಿದರದಲ್ಲಿ ಸಾಲ ಕೊಡಲು ಹಿಂದೇಟು ಹಾಕುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಪ್ರತಿಶತ ಮೂರರ ಬಡ್ಡಿದರದಲ್ಲಿ ಎಷ್ಟು ಸಾಲ ನೀಡಲಾಗಿದೆ (ವಿವರ ನೀಡುವುದು) ;

(ಊ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇಶನೂರು ಹಾಗೂ ಕಿತ್ತೂರ ಗ್ರಾಮದ ನೇಕಾರರಿಗೆ ಪ್ರತಿಶತ ಮೂರರ ಬಡ್ಡಿದರದಲ್ಲಿ ಸಾಲ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಜವಳಿ ಪಾರ್ಕ್ ಪ್ರಾರಂಭ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೪೪೩ (೧೮೦೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಎಲ್ಲ ಮೂಲಭೂತ ಸೌಲಭ್ಯ ಹೊಂದಿದ್ದು, ಇಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಜವಳಿ ಪಾರ್ಕ್ ಪ್ರಾರಂಭಿಸಲು ಕೇಂದ್ರ ಸರ್ಕಾರದವರು ಹೆಚ್ಚಿನ ಪ್ರಮಾಣದಲ್ಲಿ ನೆರವಾಗುತ್ತಿರುವುದರಿಂದ ಅದರ ಪ್ರಯೋಜನ ಪಡೆಯಲಾಗುವುದೇ ;

(ಇ) ಬೆಳಗಾವಿಯಲ್ಲಿ ಜವಳಿ ಪಾರ್ಕ್ ಪ್ರಾರಂಭಿಸಲು ಸ್ಥಳ ಲಭ್ಯ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇಲ್ಲಿ ಜವಳಿ ಪಾರ್ಕ್ ಪ್ರಾರಂಭಿಸುವುದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರಕುವುದು ಎಂದು ಅಂದಾಜು ಮಾಡಲಾಗಿದೆ ?

## ಸಿದ್ದಸಮುದ್ರ ಕೆರೆಯ ಹೂಳು ತೆಗೆಸಿ ನೀರು ಶೇಖರಣೆ ಮಾಡುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೪೪೪ (೧೮೦೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ತಾಲ್ಲೂಕಿನ ಸಿದ್ದಸಮುದ್ರ ಕೆರೆಯು ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆ ಎಂಬುದು ನಿಜವೇ ;

(ಆ) ಈ ಕೆರೆಯಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿಯಾಗುತ್ತದೆ ; ಈ ಕೆರೆಯಿಂದ ದೊಡ್ಡವಾಡ, ಬೆಳವಡಿ ಹಾಗೂ ಉಡಿಕೇರಿ ಗ್ರಾಮದ ಜಮೀನುಗಳು ಸಹ ಕಮಾಂಡ ಏರಿಯಾಗೆ ಸೇರಿರುವ ಸಂಗತಿ ನಿಜವೇ ;

(ಇ) ಈ ಕೆರೆಯಲ್ಲಿ ಹೂಳು ತುಂಬಿದ್ದರಿಂದ ನೀರು ಸಂಗ್ರಹಣೆ ಯಾಗದಿರುವ ಸಂಗತಿ ನಿಜವೇ ; ಹಾಗಿದ್ದಲ್ಲಿ ಹೂಳನ್ನು ತೆಗೆಸುವ ಕ್ರಮ ಕೈಗೊಳ್ಳಲಾಗುವುದೇ ;

(ಈ) ಬಿಜಾಪುರ ಜಿಲ್ಲೆಯಲ್ಲಿ ನದಿಯಿಂದ ಕೆರೆಗೆ ಕೆರೆಯಿಂದ ಕೆರೆಗೆ ನೀರು ಬಿಡುವಂತೆ ಈ ಕೆರೆಗೂ ಸಹ ನೀರು ಬಿಡುವ ಯೋಜನೆ ಕೈಗೊಳ್ಳಲು ವಿನಂತಿಸಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಿಜಾಪುರ ಜಿಲ್ಲೆಯಲ್ಲಿ ಸಲಹೆಗಾರರನ್ನು ನೇಮಿಸಿದಂತೆ, ಈ ಯೋಜನೆ ಕೈಗೊಳ್ಳಲು ಇಲ್ಲಿಯೂ ಸಹ ಸಲಹೆಗಾರರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಕೆರೆಗಳ ಹೂಳೆತ್ತಿ, ಅಭಿವೃದ್ಧಿಪಡಿಸುವುದು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್** (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾತದವರು) :-

೧೪೪೫ (೧೮೧೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾಂ ಜಿಲ್ಲೆಯಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ; ಇವುಗಳು ಹೊಂದಿರುವ ಒಟ್ಟು ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು ; ಇದರಲ್ಲಿ ನೀರಿನ ಕೊರತೆ ಇರುವ ಕೆರೆಗಳೆಷ್ಟು ;

(ಆ) ಕೆರೆಗಳ ಅಂತರ್ಜಲ ಕುಸಿಯಲು ಕಾರಣವೇನು ; ಸದರಿ ಕೆರೆಗಳು ಸರ್ವಋತು ಕೆರೆಗಳಾಗಿ ಪರಿವರ್ತಿಸಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು ;

(ಇ) ಕೆರೆಗಳ ಹೂಳೆತ್ತುವ ಯೋಜನೆಗಳನ್ನು ಯಾವ ಯಾವ ಅನುದಾನಗಳಿಂದ ಹಮ್ಮಿಕೊಳ್ಳಲಾಗುತ್ತಿದೆ ;

(ಈ) ಕೆರೆ ಅಭಿವೃದ್ಧಿ ಪ್ರಾಧಿಕಾರ ಯಾವಾಗ ರಚನೆಯಾಯಿತು ; ಅದರ ಕಾರ್ಯವ್ಯಾಪ್ತಿಗಳೇನು ?

## ಅನುಸೂಚಿತ ಜಾತಿ/ಪಂಗಡದವರಿಗೆ ಮಂಜೂರಾಗಿರುವ ದರಖಾಸ್ತು ಜಮೀನು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೧೪೪೬ (೧೮೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಭೂ ರಹಿತರಿಗೆ– ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಅನ್ಯರಿಗೆ ದರಖಾಸ್ತು ಮೂಲಕ ಮಂಜೂರು ಮಾಡಲಾಗಿರುವ ಜಮೀನಿನ ವಿವರಗಳನ್ನು ಜಿಲ್ಲಾವಾರು ನೀಡುವುದು ;

(ಆ) ಈ ರೀತಿಯ ಮಂಜೂರಾತಿಗೆ ಯಾವ ಯಾವ ನಿಬಂಧನೆಗಳನ್ನು ವಿಧಿಸಲಾಗುತ್ತದೆ ;

(ಇ) ಈ ಹಿಂದೆ ದರಖಾಸ್ತಿನಲ್ಲಿ ಮಂಜೂರಾತಿ ಪಡೆದ ಅನುಸೂಚಿತ ಜಾತಿ ಮತ್ತು ಪಂಗಡದ ಜಮೀನಿಗೆ ಸಂಬಂಧಪಟ್ಟಂತೆ ಮಾರಾಟ ಮಾಡಲು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನರಿಗೆ ಅನುಮತಿ ನೀಡಲಾಗಿದೆ ; ಈ ರೀತಿ ಅನುಮತಿ ನೀಡುವ ಸಂದರ್ಭದಲ್ಲಿ ಯಾವ ಯಾವ ನಿಬಂಧನೆಗಳನ್ನು ವಿಧಿಸಲಾಗಿದೆ ;

(ಈ) ಪಿಟಿಸಿಎಲ್ ನಿಯಮದಡಿ ಕಳೆದ ೦೩ ವರ್ಷಗಳಲ್ಲಿ ಎಷ್ಟು ಪ್ರಕರಣಗಳು ನೋಂದಣಿಯಾಗಿವೆ ; ಮತ್ತು ಇವುಗಳಲ್ಲಿ ಬಗೆಹರಿದ ಪ್ರಕರಣಗಳೆಷ್ಟು ; ಉಳಿಕೆ ಪ್ರಕರಣಗಳೆಷ್ಟು ?

## ಶೀಘ್ರಲಿಪಿಗಾರರ ಸಂಘಕ್ಕೆ ಕಂದಾಯ ಭವನದಲ್ಲಿ ಸ್ಥಳಾವಕಾಶ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೪೪೭ (೧೮೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಶೀಘ್ರಲಿಪಿಗಾರರ ಸಂಘ (ರಿ), ಬೆಂಗಳೂರು ಈ ಸಂಘವು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ ಯಾವುದು ; ಈ ಮೊದಲು ಈ ಸಂಘ ಎಲ್ಲಿ ಕಾರ್ಯನಿರ್ವಹಿಸುತ್ತಿತ್ತು ;

(ಆ) ಈ ಮೊದಲಿದ್ದ ಜಾಗದಿಂದ ಸ್ಥಳಾಂತರ ಮಾಡಲು ಆದೇಶಿಸಲಾಗಿದೆಯೇ ; ಆ ಆದೇಶದ ಪ್ರತಿ ಒದಗಿಸುವುದು ಹಾಗೂ ಜಾಗ ನೀಡಲು ಷರತ್ತು ಮತ್ತು ಕರಾರುಗಳನ್ನು ವಿಧಿಸಲಾಗಿದೆಯೇ ; ಆ ನಿಬಂಧನೆಗಳೇನು ವಿವರಿಸಿ ಹಾಗೂ ಅದರ ಪ್ರತಿ ನೀಡುವುದು ;

(ಇ) ಹಾಗಿದ್ದಲ್ಲಿ, ಕಂದಾಯ ಭವನದಲ್ಲಿ ಇವರಿಗೆ ಜಾಗ ಕಲ್ಪಿಸಲು ಸರ್ಕಾರ ಉದ್ದೇಶಿಸಿದೆಯೇ ; ಸ್ಥಳಾವಕಾಶವನ್ನು ಕಲ್ಪಿಸುವ ಕುರಿತಂತೆ ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರಿಸುವುದು) ;

(ಈ) ಕಂದಾಯ ಭವನದಲ್ಲಿ ಇವರಿಗೆ ಒದಗಿಸಿರುವ ಈ ಕೊಠಡಿಗೆ ಬೇಕಾಗುವ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ;

(ಉ) ಸದರಿ ಕಂದಾಯ ಭವನದ ಜಾಗವನ್ನು ಸರ್ಕಾರ ಉಚಿತವಾಗಿ ನೀಡುವುದೇ ಅಥವಾ ಕಟ್ಟಡ ಬಾಡಿಗೆ ಇತ್ಯಾದಿ ವಿಧಿಸಲಾಗುವುದೇ (ವಿವರ ನೀಡುವುದು) ; ಈ ಹಿಂದಿನ ಕಟ್ಟಡದ ಬಾಡಿಗೆಯನ್ನು

ಸರ್ಕಾರವೇ ಪಾವತಿಸುತ್ತಿದ್ದುದು ನಿಜವೇ ; ನಿಜವಿದ್ದಲ್ಲಿ ಈಗ ನೀಡಿರುವ ಜಾಗಕ್ಕೆ ಬಾಡಿಗೆ ಪಡೆಯುವುದು ಸರಿಯೇ ಅಥವಾ ಉಚಿತವಾಗಿ ನೀಡಲು ಸರ್ಕಾರ ಮುಂದಾಗುವುದೇ (ವಿದ್ಯುತ್, ನೀರಿನ ಶುಲ್ಕಪಾವತಿ ಸೇರಿದಂತೆ ವಿವರ ಒದಗಿಸುವುದು) ?

## ಕೆರೆಗಳ ಹೂಳೆತ್ತುವ ಯೋಜನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೪೪೮ (೧೮೧೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಸಣ್ಣ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಸರ್ಕಾರವು ಪ್ರತಿವರ್ಷ ಕೆರೆಗಳ ಹೂಳೆತ್ತುವ ಯೋಜನೆಗಾಗಿ ಒದಗಿಸಲಾಗುವ ಅನುದಾನ ಎಷ್ಟು ; ಕಳೆದ ಸಾಲಿನ ಬೇಸಿಗೆ ಹಂಗಾಮಿನಲ್ಲಿ ಎಷ್ಟು ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ; ಬಾಕಿ ಉಳಿದ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ಸರ್ಕಾರವು ಕೆರೆಗಳ ಹೂಳೆತ್ತಲು ನಿಗದಿಪಡಿಸಿದ ಅನುದಾನ ಸಂಪೂರ್ಣ ಬಳಕೆ ಮಾಡಿಕೊಳ್ಳಲಾಗಿದೆಯೇ ; ಒಂದು ವೇಳೆ ಬಳಕೆ ಮಾಡದಿದ್ದ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು) ?

## ಮೀನು ಸಾಕಾಣಿಕೆ ಕೇಂದ್ರಗಳು

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೪೯ (೧೮೧೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಲ್ಲಿರುವ ಮೀನು ಸಾಕಾಣಿಕೆ ಕೇಂದ್ರಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಎರಡು ಜಿಲ್ಲೆಗಳಲ್ಲಿ ಕೆಲವೆಡೆ ಮೀನು ಸಾಕಾಣಿಕೆಗಾಗಿ ನಿರ್ಮಿಸಿದ ಹೊಂಡಗಳು ನಿರುಪಯುಕ್ತವಾಗಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಅಂತಹ ಎಷ್ಟು ಹೊಂಡಗಳಿವೆ (ತಾಲ್ಲೂಕುವಾರು ವಿವರಣೆ ನೀಡುವುದು) ;

(ಇ) ಅವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆಯನ್ನು ಉತ್ತೇಜಿಸಲು ಅನುಕೂಲ ಇರುವ ತಾಲ್ಲೂಕುಗಳು ಯಾವುವು ; ಉತ್ತೇಜನಕ್ಕಾಗಿ ಕೈಗೊಂಡ ಕ್ರಮವೇನು ?

## ಐಟಿಐ ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡುವುದು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೪೫೦ (೧೮೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ವೋಚ್ಚ ನ್ಯಾಯಾಲಯದ ಆದೇಶದನುಸಾರ "All those persons who are degree holders in the feeder cadre of the Training Officers shall not be

reverted in the meantime" ಇದರಂತೆ "Feeder cadre" ದಿಂದ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳ ವಿವರಗಳನ್ನು ಒದಗಿಸುವುದು ;

(ಆ) **"Feeder cadre"** ನಲ್ಲಿರದೇ ನಿಯಮ ಬಾಹಿರವಾಗಿ ಮುಂಬಡ್ತಿ ಪಡೆದ ಪ್ರಾಚಾರ್ಯರುಗಳಿಗೆ ಹಿಂಬಡ್ತಿ ನೀಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ ; **ಹಿಂಬಡ್ತಿ** ನೀಡುವಲ್ಲಿ ಅನಗತ್ಯ ಕಾಲವಿಳಂಬ ಮಾಡುತ್ತಿರುವ ಕಾರಣಗಳೇನು ; ಇದಕ್ಕೆ ಕಾರಣಕರ್ತರಾದ ಇಲಾಖಾ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು ; (ಪ್ರಾಚಾರ್ಯರುಗಳಿಗೆ **ಹಿಂಬಡ್ತಿ** ನೀಡಿದಲ್ಲಿ ತೆರವಾಗುವ ಹುದ್ದೆಗಳಿಗೆ ನಿಯಮಾನುಸಾರ ಅರ್ಹರಿರುವ ತರಬೇತಿ ಅಧಿಕಾರಿಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು) ?

## ಆಸ್ತಿ ನೋಂದಣಿಯಲ್ಲಿನ ಅಕ್ರಮಗಳು

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೪೫೧ (೧೮೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಸ್ಥಿರಾಸ್ತಿಗಳ ನೋಂದಣಿಯಲ್ಲಿ ಭಾರಿ ಗೋಲ್‌ಮಾಲ್ ಪ್ರಕರಣಗಳು ಬೆಳಕಿಗೆ ಬಂದಿರುವುದು ನಿಜವೇ ;

(ಆ) ಎಲ್ಲೆಲ್ಲಿ ಇಂತಹ ಪ್ರಕರಣಗಳು ಬೆಳಕಿಗೆ ಬಂದಿವೆ ; ಅಲ್ಲದೇ, ಬೆಂಗಳೂರು ನಗರದ ಸುತ್ತಮುತ್ತಲಲ್ಲೇ ಜಾಸ್ತಿ ಎಂಬುದರ ಬಗ್ಗೆ ಸರ್ಕಾರದ ನಿಲುವೇನು ;

(ಇ) ನಕಲು ನಮೂನೆ ೧೧ಬಿ ಸೃಷ್ಟಿಗೆ ಕಾರಣಕರ್ತರು ಯಾರು ; ಇವರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ ;

(ಈ) ಇದು ಬೆಳಕಿಗೆ ಬಂದಿದ್ದು ಹೇಗೆ ; ಪಂಚಾಯಿತಿ ವ್ಯಾಪ್ತಿಗಳಲ್ಲಿ ಕೃಷಿ ಭೂಮಿಯನ್ನು ಪರಿವರ್ತನೆ ಮಾಡದೆ ಬಡಾವಣೆಗಳನ್ನು ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಮಾರಾಟ ಮಾಡಲು ಇಂತಹ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣಗಳ ವಿವರಗಳನ್ನು ನೀಡುವುದು ;

(ಉ) ಇದರಲ್ಲಿ ಅಧಿಕಾರಿಗಳು ಸಹ ಭಾಗಿಯಾಗಿದ್ದು, ಇದರಿಂದ ಪಂಚಾಯ್ತಿಗಳಿಗೆ ನಷ್ಟವನ್ನುಂಟು ಮಾಡಿ ಸರ್ಕಾರಕ್ಕೆ ವಂಚಿಸುತ್ತಿರುವವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ;

(ಊ) ಇಂತಹ ಅಕ್ರಮ ವಂಚನೆ ತಡೆಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮ ಜರುಗಿಸಲು ಮುಂದಾಗಿರುತ್ತದೆ ?

## ನಕಲಿ ಜಾತಿ ಪ್ರಮಾಣ ಪತ್ರದ ಹಾವಳಿ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೪೫೨ (೧೮೨೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಕಲಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ವಿತರಿಸುವ ಜಾಲ ಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಎಲ್ಲೆಲ್ಲಿ ಪ್ರಕರಣಗಳು ಪತ್ತೆಯಾಗಿವೆ ; ಇದಕ್ಕೆ ಕಾರಣಗಳೇನು (ಜಿಲ್ಲಾವಾರು ವಿವರ ಒದಗಿಸುವುದು) ;

(ಆ) ಸದರಿ ಪ್ರಮಾಣ ಪತ್ರಗಳನ್ನು ಪಡೆಯಲು ಹಾಲಿ ಇರುವ ನಿಯಮ ಮಾನದಂಡಗಳೇನು ; ಇವುಗಳನ್ನು ಉಲ್ಲಂಘಿಸಲಾಗುತ್ತಿದೆಯೇ ; ಇದಕ್ಕೆ ಕಾರಣರ್ಯಾರು ;

03390-3

(ಇ) ಒಬ್ಬೊಬ್ಬರಿಗೆ ಎರಡೆರಡು ಪ್ರಮಾಣ ಪತ್ರಗಳನ್ನು ವಿತರಿಸುವ ಹಗರಣ ಬೆಳಕಿಗೆ ಬಂದಿದೆಯೇ ; ಈ ಎಲ್ಲಾ ಪ್ರಮಾಣ ಪತ್ರವನ್ನು ಪಡೆಯಲು ಅನುಸರಿಸುವ ಕ್ರಮಗಳನ್ನು ಸರಿಯಾಗಿ ಪಾಲಿಸದಿರುವುದರಿಂದ ಈ ರೀತಿ ಆಗುತ್ತಿದೆಯೇ ;

(ಈ) ಶಿಕ್ಷಣಕ್ಕೆ, ಉದ್ಯೋಗಕ್ಕೆ ಹಾಗೂ ಚುನಾವಣೆಗೆ ಸ್ಪರ್ಧಿಸಲು ಮೀಸಲಾತಿ ಅವಕಾಶ ಸೇರಿದಂತೆ ಇನ್ನಿತರ ಕಾರಣಗಳಿಗಾಗಿ ಇಂತಹ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಪಡೆಯಲು ಬೇರೆ ಬೇರೆ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆಯೇ ;

(ಉ) ಇದರಲ್ಲಿ ಏಜೆಂಟರುಗಳ ಕೈವಾಡದ ಜತೆಗೆ, ತಾಲ್ಲೂಕು ಕಛೇರಿಗಳ ಅಧಿಕಾರಿ–ನೌಕರರು ಕೈಜೋಡಿಸಿರುವ ಶಂಕೆ ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ; ಅದೇ ರೀತಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಕೆಲಸವು ಸೇರಿದಂತೆ ಸರ್ಕಾರಿ ಸೌಲಭ್ಯ ಪಡೆದ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ?

## ಅರಣ್ಯ ಸಂಪತ್ತು ವೃಕ್ಷ ಪ್ರಭೇದ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೩ (೧೮೨೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯಗಳಲ್ಲಿರುವ ಮರಗಳ ಜಾತಿ ಪ್ರಭೇದ ಸಂಖ್ಯೆಯನ್ನು ವೈಜ್ಞಾನಿಕವಾಗಿ ಗುರುತಿಸಿ ಅಧ್ಯಯನ ನಡೆಸಲು ತಜ್ಞರ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿದೆಯೇ ;

(ಆ) ಕೆಲ ಜಾತಿ ಮರಗಳ ವಿಶೇಷತೆಯನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಹಾಗೂ ಮರಗಳ ಬಗ್ಗೆ ವೈಜ್ಞಾನಿಕ ಆವಿಷ್ಕಾರ ಉಪಯೋಗ ಕುರಿತು ಅರಿವು ಮೂಡಿಸಲು ಸರ್ಕಾರ ಮುಂದಾಗುವುದೇ ; ಇದಕ್ಕಾಗಿ ಯಾವ ಯೋಜನೆಯನ್ನು ರೂಪಿಸಲಾಗಿದೆ ;

(ಇ) ರಾಜ್ಯದ ಅರಣ್ಯದಲ್ಲಿರುವ ಸಸ್ಯ ಸಂಪತ್ತು ಎಷ್ಟು ; ಇವುಗಳಲ್ಲಿ ವನ್ಯಧಾಮ, ಪ್ರಾಣಿಧಾಮಗಳಾವುವು ;

(ಈ) ಲಭ್ಯವಿರುವ ಪ್ರಾಕೃತಿಕ ಸಂಪತ್ತಿನ ರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದಕ್ಕಾಗಿ ಮರಗಳ ಅರಿವಿಗೆ ಅನ್‌ಲೈನ್ ಆಂದೋಲನ ಮಾಡಲು ಸರ್ಕಾರ ಚಿಂತಿಸುವುದೇ ;

(ಉ) ರಾಜ್ಯದಲ್ಲಿರುವ ವಿವಿಧ ಸಸ್ಯ ಸಂಕುಲ ವೃಕ್ಷ ಪ್ರಭೇಧಗಳೆಷ್ಟು (ಅರಣ್ಯವಾರು ವಿವರಗಳನ್ನು ಒದಗಿಸುವುದು) ?

## ವಸತಿ ಗೃಹಗಳ ಕೊರತೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೫೪ (೧೮೨೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಯಾವ ಸ್ಥಳಗಳಲ್ಲಿ ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ (ಹೆಸರು ಮತ್ತು ಪದನಾಮದೊಂದಿಗೆ ಮಾಹಿತಿ ನೀಡುವುದು) ;

(ಆ) ಜಿಲ್ಲೆಯಲ್ಲಿ ಎಷ್ಟು ವಸತಿ ಗೃಹಗಳಿವೆ ; ಆ ಗೃಹಗಳ ಚದರ ಅಡಿ ಮತ್ತು ಸುತ್ತಳತೆ ಎಷ್ಟು ; ಅರಣ್ಯ ಸಿಬ್ಬಂದಿಗಳಿಗೆ ವಸತಿ ಗೃಹಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ೨೦೧೧ ರಿಂದ ೨೦೧೪ನೇ ಮೇ ತಿಂಗಳವರೆಗೆ ವಸತಿ ಗೃಹಗಳ ದುರಸ್ಥಿಗೆ ಸರ್ಕಾರವು ಎಷ್ಟು ಹಣ ಬಿಡುಗಡೆ ಮಾಡಿದೇ ; ವಸತಿ ಗೃಹಗಳ ದುರಸ್ಥಿ/ಸುಣ್ಣಬಣ್ಣಕ್ಕೆ ಹಾಗೂ ಇತರೆ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೇ ; ಅಂಕಿ ಅಂಶಗಳೊಂದಿಗೆ ಹಾಗೂ ಗುತ್ತಿಗೆದಾರರ ಹೆಸರು, ಯಾವ ದಿನಾಂಕದಂದು ದುರಸ್ಥಿ ಮಾಡಲಾಗಿದೆ (ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು) ?

## ಅಂದಿನ ಉಪವಿಭಾಗಾಧಿಕಾರಿಯಿಂದ ಅಧಿಕಾರ ದುರುಪಯೋಗ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೫೫ (೧೮೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೦೯ರ ಅವಧಿಯಲ್ಲಿ ಕೊಡುಗು ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಯು

ಅಧಿಕಾರ ದುರುಪಯೋಗ ಪಡಿಸಿಕೊಂಡು ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಅಧಿಕಾರಿಯು ಕುಶಾಲನಗರದ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮುಳ್ಳಸೋಗೆ ಗ್ರಾಮದ ಸ.ನಂ. ೯೬ ರಲ್ಲಿ ೧.೧೨ ಎಕ್ರೆ ಜಮೀನಿನ ಖಾತೆಯನ್ನು ಜಾಮೀಯ ಮಸೀದಿಗೆ ವರ್ಗಾಯಿಸಿ ತರಾತುರಿಯಲ್ಲಿ ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಇ) ಬಂದಿದ್ದಲ್ಲಿ, ಸರ್ಕಾರವು ಈ ಅಧಿಕಾರಿ ವಿರುದ್ಧ ಕೈಗೊಳ್ಳಲಾಗಿರುವ ಕ್ರಮವೇನು ;

(ಈ) ಭೂಸುಧಾರಣೆ ಕಾಯಿದೆ ನಿಯಮ ೭೯ಎ, ೭೯ಬಿ, ಉಲ್ಲಂಘನೆಯಾಗಿರುವ ಪ್ರಕರಣಗಳು ಹಾಗೂ ೬೦ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಈ ಅಧಿಕಾರಿಯು ಅಧಿಕಾರ ದುರುಪಯೋಗ ಪಡಿಸಿಕೊಂಡು ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಆದೇಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರವು ಈ ಅಧಿಕಾರಿ ವಿರುದ್ಧ ಯಾವ ಕ್ರಮವನ್ನು ಕೈಗೊಂಡಿದೆ ;

(ಊ) ಅಧಿಕಾರ ದುರುಪಯೋಗಪಡಿಸಿಕೊಂಡು ಅವ್ಯವಹಾರ ನಡೆಸಿರುವ ಈ ಅಧಿಕಾರಿ ವಿರುದ್ಧ ಕೊಡಗು ಜಿಲ್ಲಾಧಿಕಾರಿಯವರು ದಿನಾಂಕ : ೨೬-೧೦-೨೦೧೧ ರಂದು ಸಲ್ಲಿಸಿರುವ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಹಾಗಿದ್ದಲ್ಲಿ, ಸರ್ಕಾರವು ಈ ಅಧಿಕಾರಿ ವಿರುದ್ಧ ಯಾವ ಕ್ರಮ ಕೈಗೊಂಡಿದೆ ?

## ಬಾಲ ಕಾರ್ಮಿಕ ಪದ್ಧತಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೫೭ (೧೮೧೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಇದುವರೆವಿಗೂ ರಾಜ್ಯದಲ್ಲಿ ಗುರುತಿಸಲಾಗಿರುವ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ಪುಸ್ತಕ, ಊಟ, ಬಟ್ಟೆ, ಸೈಕಲ್‌ಗಳನ್ನು ನೀಡಿದರೂ ಸಹ ಸರ್ಕಾರಿ ಶಾಲೆಗಳಿಗೆ ಹೋಗದೆ ಬಾಲ ಕಾರ್ಮಿಕರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಸರ್ಕಾರಿ ಶಾಲೆಗಳಿಗೆ ಹೋಗುವಂತೆ ಪ್ರೇರಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಉಡುಪಿ ಜಿಲ್ಲೆಯಲ್ಲಿರುವ ಕಾರ್ಖಾನೆ ಮತ್ತು ಕಾರ್ಮಿಕರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೫೭ (೧೮೩೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿರುವ ಕಾರ್ಖಾನೆಗಳ ಒಟ್ಟು ಸಂಖ್ಯೆ ಎಷ್ಟು ; ಈ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು (ಕಾರ್ಖಾನೆವಾರು, ಕಾರ್ಮಿಕರ ಸಂಖ್ಯೆವಾರು ವಿವರ ನೀಡುವುದು) ;

(ಆ) ಈ ಕಾರ್ಮಿಕರಲ್ಲಿ ಭವಿಷ್ಯನಿಧಿ ಸೌಲಭ್ಯ ಹೊಂದಿರುವವರ ಮತ್ತು ಹೊಂದಿಲ್ಲದ ಕಾರ್ಮಿಕರ ಸಂಖ್ಯೆ ಎಷ್ಟು (ಕಾರ್ಖಾನೆವಾರು ಪ್ರತ್ಯೇಕ ವಿವರ ನೀಡುವುದು) ;

(ಇ) ಸದರಿ ಕಾರ್ಮಿಕರುಗಳ ಪೈಕಿ ಇ.ಎಸ್.ಐ. ಗುರುತಿನ ಚೀಟಿ ಹೊಂದಿರುವ ಕಾರ್ಮಿಕರ ಸಂಖ್ಯೆ ಎಷ್ಟು ; ಇ.ಎಸ್.ಐ. ಸೌಲಭ್ಯ ಹೊಂದಿರುವ ಕಾರ್ಮಿಕರಲ್ಲಿ ಈ ಸೌಲಭ್ಯದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು ; ಈ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ವನ್ಯಜೀವಿಗಳಿಂದ ದಾಳಿ ಮತ್ತು ಹಾನಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೫೮ (೧೮೬೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡುಪ್ರಾಣಿಗಳಿಂದ ಹಾನಿಗೊಳಗಾದ ಬೆಳೆಗಳಿಗೆ ಪರಿಹಾರ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ನೀಡಲಾದ ಪರಿಹಾರ ಮೊತ್ತವೆಷ್ಟು (ಜಿಲ್ಲಾವಾರು, ವರ್ಷವಾರು, ಮೊತ್ತವಾರು ವಿವರ ನೀಡುವುದು) ;

(ಆ) ಕಳೆದ ಮೂರು ವರ್ಷಗಳಲ್ಲಿ ಕಾಡುಪ್ರಾಣಿಗಳ ದಾಳಿಯಿಂದ ಜೀವಹಾನಿ ಮತ್ತು ಅಂಶಿಕ ಹಾನಿಯಾದ ಒಟ್ಟು ಪ್ರಕರಣಗಳೆಷ್ಟು ; ಇವುಗಳಿಗೆ ನೀಡಲಾದ ಪರಿಹಾರ ಮೊತ್ತವೆಷ್ಟು (ಜಿಲ್ಲಾವಾರು, ವರ್ಷವಾರು, ಪ್ರಕರಣವಾರು, ಮೊತ್ತವಾರು ವಿವರ ನೀಡುವುದು) ;

(ಇ) ಕಳೆದ ಮೂರು ವರ್ಷಗಳಲ್ಲಿ ಕಾಡು ಪ್ರಾಣಿಗಳ ಹಾವಳಿಯನ್ನು ನಿಯಂತ್ರಿಸಲು ರಚಿಸಲಾದ ತಡೆಬೇಲಿಗೆ ತಗುಲಿದ ವೆಚ್ಚವೆಷ್ಟು (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು) ?

## ಕಾಗದ ರಹಿತ ಕಛೇರಿ ಕಾರ್ಯನಿರ್ವಹಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೫೯ (೧೮೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಜಿಲ್ಲಾಧಿಕಾರಿಗಳ ಕಛೇರಿಗಳು ಕಾಗದರಹಿತ (Paperless) ವಾಗಿ ಕಾರ್ಯನಿರ್ವಹಿಸುತ್ತಿವೆ ; ಅಂತಹ ಕಛೇರಿಗಳು ಯಾವುವು ;

(ಆ) ತಾಲ್ಲೂಕು ಕಛೇರಿಗಳಲ್ಲಿ ಕಡತಗಳು ಕಳವಾಗುತ್ತಿರುವ, ಕಣ್ಮರೆಯಾಗುತ್ತಿರುವ, ದಾಖಲೆಗಳನ್ನು ತಿದ್ದುತ್ತಿರುವ ಹಾಗೂ ಸರ್ಕಾರಿ ಸುತ್ತೋಲೆಗಳ ಪ್ರತಿಗಳು ಲಭ್ಯವಾಗುತ್ತಿಲ್ಲದಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಕಛೇರಿಗಳನ್ನು ಸಂಪೂರ್ಣ ಗಣಕೀಕೃತಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ, ಕಾರಣವೇನು ;

(ಇ) ಅಕ್ರಮ–ಸಕ್ರಮ ಯೋಜನೆಯ ಅರ್ಜಿ ನಮೂನೆ ೫೦ ಮತ್ತು ೫೩ರ ಎಲ್ಲಾ ಸುತ್ತೋಲೆಯ ಪ್ರತಿಗಳು ತಾಲ್ಲೂಕು ಕಛೇರಿಯಲ್ಲಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ಅರ್ಜಿ ನಮೂನೆ ೫೦ ಮತ್ತು ೫೩ರ ಎಲ್ಲಾ ಸುತ್ತೋಲೆಗಳ ಪ್ರತಿಗಳನ್ನು ಒದಗಿಸುವುದು) ?

## ಸರ್ಕಾರಿ ಭೂಮಿಯ ಒತ್ತುವರಿ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೬೦ (೧೮೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಲಾದ ಒಟ್ಟು ಪ್ರಕರಣಗಳೆಷ್ಟು ; ಸರ್ಕಾರಿ ಭೂಮಿ ಒತ್ತುವರಿಯನ್ನು ತೆರವು ಮಾಡಲಾದ ಪ್ರಕರಣಗಳೆಷ್ಟು ; ಸರ್ಕಾರಿ ಭೂಮಿ ಒತ್ತುವರಿಯನ್ನು

ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳೆಷ್ಟು ; ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ತಗುಲಿದ ವೆಚ್ಚವೆಷ್ಟು (ಜಿಲ್ಲಾವಾರು, ವಿಸ್ತೀರ್ಣವಾರು ವರ್ಷಾವಾರು ವಿವರ ನೀಡುವುದು) ;

(ಆ) ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಖಾಸಗಿಯವರ ಹೆಸರಿಗೆ ವರ್ಗಾಯಿಸಿಕೊಳ್ಳಲಾದ ಪ್ರಕರಣಗಳೆಷ್ಟು (ಜಿಲ್ಲಾವಾರು, ವಿಸ್ತೀರ್ಣವಾರು ವಿವರ ನೀಡುವುದು) ;

(ಇ) ಹೀಗೆ ಖಾಸಗಿಯವರ ಹೆಸರಿಗೆ ವರ್ಗಾಯಿಸಲು ಸಹಕರಿಸಿದ ಅಧಿಕಾರಿಗಳ ಮೇಲೆ ಶಿಸ್ತು ಮತ್ತು ಕಾನೂನು ಕ್ರಮ ಕೈಗೊಳ್ಳಲಾಗಿದೆಯೇ ; ಕೈಗೊಳ್ಳಲಾಗಿದ್ದಲ್ಲಿ ಇದುವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ (ತಾಲ್ಲೂಕುವಾರು, ಪ್ರಕರಣವಾರು ವಿವರ ನೀಡುವುದು) ?

**ಕೆರೆಕೋಡಿ ಬಳಿ ತಡೆಗೋಡೆ ನಿರ್ಮಾಣ**

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೧೪೬೧ (೧೮೩೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಅಬ್ಬೂರು ಕೆರೆ ಕೋಡಿ ಪಕ್ಕದಲ್ಲಿ ಶ್ರೀ ಶನೇಶ್ವರ ದೇವಸ್ಥಾನದ ಹಿಂಭಾಗ ತಡೆಗೋಡೆ ಹಾಗೂ ಜನರಿಗೆ ಅನುಕೂಲವಾಗಲು ಶೆಲ್ಟರ್ ನಿರ್ಮಾಣಕ್ಕೆ ಬೇಡಿಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈಗಾಗಲೇ ಸ್ಥಳ ತನಿಖೆ ಮಾಡಿ ಸರ್ಕಾರಕ್ಕೆ ವರದಿ ಹಾಗೂ ದಾಖಲೆ ಕಳುಹಿಸಲಾಗಿದೆಯೇ ;

(ಇ) ಈ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳಲಾಗುವುದು ; ಎಷ್ಟು ವೆಚ್ಚದಲ್ಲಿ ಈ ಕಾಮಗಾರಿ ನಿರ್ವಹಿಸಲಾಗುವುದು ;

(ಈ) ಜನರ ಅಪೇಕ್ಷೆಯಂತೆ ಕೂಡಲೇ ಕಾಮಗಾರಿ ಆರಂಭಿಸಲಾಗುವುದೇ ?

## ಹೆಬ್ಬಳ್ಳಿ ನೇಕಾರ ಕಾಲೋನಿಗೆ ಜಾಗ ನೀಡುವುದು

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೧೪೬೨ (೧೮೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆ, ಹೆಬ್ಬಳ್ಳಿ ಗ್ರಾಮದಲ್ಲಿ ಬಹುತೇಕ ನೇಕಾರರು ನೇಕಾರಿಕೆ ವೃತ್ತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಡ ನೇಕಾರರಿಗೆ ಗ್ರಾಮದ ಸರ್ವೆ ನಂ. ೫೩೩ರಲ್ಲಿ ೧೦ ಎಕರೆ ಜಮೀನನ್ನು ನೇಕಾರ ಕಾಲೋನಿ ಮಾಡಲು ಹಿಂದಿನ ಮುಖ್ಯಮಂತ್ರಿಗಳು ದಿನಾಂಕ : ೨೨–೨–೨೦೧೩ರಂದು ಆದೇಶ ಮಾಡಿರುವರೇ ;

(ಇ) ಹಾಗಿದ್ದಲ್ಲಿ, ಬಡ ನೇಕಾರರ ಕಾಲೋನಿ ಮಾಡಲು ಇದುವರೆಗೆ ನಿರ್ಲಕ್ಷ್ಯ ಮಾಡಲು ಕಾರಣವೇನು ; ಜಮೀನು ಮಂಜೂರಾತಿಗೆ ಇರುವ ತೊಂದರೆ ಏನು ;

(ಈ) ಕೂಡಲೇ ಜಮೀನು ಮಂಜೂರು ಮಾಡಿ, ಹೆಬ್ಬಳ್ಳಿ ಗ್ರಾಮದ ನೇಕಾರರಿಗೆ ಅನುಕೂಲ ಮಾಡಿಕೊಡಲಾಗುವುದೇ ; ಯಾವಾಗ ಮಾಡಲಾಗುವುದು ?

## ರೈತೋಪಯೋಗಿ ಯೋಜನೆಗಳು

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೧೪೬೩ (೧೮೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯ ಬಗ್ಗೆ ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಒಂದಲ್ಲ ಒಂದು ಸಮಸ್ಯೆ ಬಗ್ಗೆ ರೈತರು ಅಲೆದಾಡುತ್ತಿರುವುದು ನಿಜವೇ ;

(ಆ) ಇಲಾಖೆಯ ಅಧಿಕಾರಿ ಹಾಗೂ ಇತರ ಮಾರ್ಗಸೂಚಿಗಳನ್ನು ಪ್ರತಿ ತಾಲ್ಲೂಕು ಕೇಂದ್ರದಲ್ಲೂ ಅಳವಡಿಸಲು ಇರುವ ತೊಂದರೆಯೇನು ;

(ಇ) ಇಲಾಖೆಯಲ್ಲಿನ ಅನುಕೂಲತೆಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಈ) ಸಣ್ಣಪುಟ್ಟ ತಪ್ಪುಗಳನ್ನು ಹೋಬಳಿ ಮಟ್ಟದಲ್ಲಿ ತೀರ್ಮಾನ ಮಾಡಲು ಹೋಬಳಿ ಅಧಿಕಾರಿಗಳಿಗೆ ಅಧಿಕಾರ ನೀಡಲಾಗುವುದೆ ?

## ಮಳೆಯ ಕೊರತೆಯಿಂದ ಉದ್ಭವಿಸಿರುವ ಬರಗಾಲ

**ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) :–**

೧೪೬೪ (೧೮೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ಈ ವರ್ಷ ಮಳೆ ಬಾರದೆ ಬರಗಾಲ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದ ಯಾವ–ಯಾವ ಜಿಲ್ಲೆಗಳಲ್ಲಿ ಯಾವ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿದೆ ;

(ಇ) ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯ ನಿರೀಕ್ಷಿಸಲು ಸರಿಯಾದಂತಹ ಮಾಹಿತಿಗಳನ್ನು ಸಮರ್ಪಕವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆಯೇ (ಕುಡಿಯುವ ನೀರು, ದನಗಳ ಮೇವು, ಕಾಮಗಾರಿ ಇನ್ನಾವುದೇ ಕೆಲಸಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು) ?

## ಬಾಲ ಕಾರ್ಮಿಕರನ್ನು ಪತ್ತೆ ಹಚ್ಚುವುದು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೬೫ (೧೮೪೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕರನ್ನು ಗುರುತಿಸಲು ಇಲಾಖೆಯು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಆ) ಇಲ್ಲಿಯವರೆಗೆ ಎಷ್ಟು ಬಾಲ ಕಾರ್ಮಿಕರನ್ನು ಪತ್ತೆ ಮಾಡಲಾಗಿದೆ ;

(ಇ) ಪತ್ತೆ ಮಾಡಲಾದ ಬಾಲ ಕಾರ್ಮಿಕರಿಗೆ ಯಾವ ಯಾವ ನೆರವು ನೀಡಲಾಗಿದೆ ;

(ಈ) ಬಾಲ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಶಿಕ್ಷಣ ನೀಡಲು ಏನು ಕ್ರಮ ಕೈಗೊಳ್ಳಲಾಗಿದೆ ?

## ಅರಣ್ಯ ಇಲಾಖೆಯ ಅನುದಾನದ ಮಾಹಿತಿ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೬೬ (೧೮೪೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಗೆ ಪ್ರಸಕ್ತ ವರ್ಷಕ್ಕಾಗಿ ಅರಣ್ಯ ಇಲಾಖೆ ಬಿಡುಗಡೆಗೊಳಿಸಲಾದ ಒಟ್ಟು ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಈ ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು (ವಿಭಾಗವಾರು, ಯೋಜನಾವಾರು, ತಾಲ್ಲೂಕುವಾರು ವಿವರಗಳೊಂದಿಗೆ) ;

(ಇ) ಆಯಾ ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚಕ್ಕೆ ನಿಗದಿಪಡಿಸಿರುವ ಮೊತ್ತವೆಷ್ಟು ?

**ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರಿಗೆ ಮನೆಗಳು**

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) ಮತ್ತು**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೬೭ (೧೮೪೪+೧೮೩೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗೆ ಕಳೆದ ೩ ವರ್ಷಗಳಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ನೀಡಲಾಗಿದೆಯೇ (ಜಿಲ್ಲಾ, ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) ;

(ಆ) ಜಿಲ್ಲೆಯಲ್ಲಿ ಮೀನುಗಾರರಿಗೆ ಮನೆ ನಿರ್ಮಾಣ ಮಾಡಲು ಸರ್ಕಾರ ಅನುದಾನ ಬಿಡುಗಡೆ ಮಾಡಿದೆಯೇ ; ಬಿಡುಗಡೆ ಮಾಡಿದ್ದಲ್ಲಿ, ಎಲ್ಲಾ ಅನುದಾನ ಬಿಡುಗಡೆ ಆಗಿದೆಯೇ (ವಿವರಗಳನ್ನು ನೀಡುವುದು) ;

(ಇ) ಮೀನುಗಾರಿಕಾ ಮನೆ ಕೋರಿ ಅರ್ಜಿ ಸಲ್ಲಿಸಿ ಅಂತೆಯೇ ಮಂಜೂರಾದ ಫಲಾನುಭವಿಗಳಿಗೆ ಸಹಾಯಧನ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ; ಸದರಿಯವರಿಗೆ ಸಹಾಯಧನ ನೀಡುವಲ್ಲಿ ವಿಳಂಬವಾಗಲು ಕಾರಣವೇನು (ವರ್ಷವಾರು, ವಿಧಾನಸಭಾವಾರು, ಪ್ರಕರಣವಾರು ವಿವರ ನೀಡುವುದು) ;

(ಈ) ದಕ್ಷಿಣ ಕನ್ನಡದಲ್ಲಿ ಸರ್ಕಾರದ ವತಿಯಿಂದ ಫ್ಲಾಟ್‌ಗಳನ್ನು ರಚನೆ ಮಾಡಿ ಅರ್ಹ ಬಡವರಿಗೆ ಹಂಚುವ ಕಾರ್ಯಕ್ರಮದ ಪ್ರಸ್ತಾವನೆ

ಸರ್ಕಾರದ ಮುಂದಿದೆಯೇ ; ಇದ್ದರೆ, ಯಾವಾಗ ಕಾರ್ಯಗತ ಮಾಡಲಾಗುವುದು ;

(ಉ) ಸರ್ಕಾರದ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಸತಿ ಮನೆಗಳನ್ನು ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು ?

## ಜಿಲ್ಲೆಗಳ ಹೆಸರುಗಳಲ್ಲಿ ಮಾರ್ಪಾಟು

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೧೪೬೮ (೧೮೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ರಾಜ್ಯದ ಜಿಲ್ಲೆಗಳ ಹೆಸರುಗಳನ್ನು ಮಾರ್ಪಾಟುಗೊಳಿಸುವ ವಿಚಾರ ಪ್ರಗತಿಯಲ್ಲಿದೆಯೇ ; ಇದ್ದರೆ ಯಾವುವು (ವಿವರ ನೀಡುವುದು) ;

(ಆ) ನೂತನವಾಗಿ ರಚನೆಗೊಂಡ ಜಿಲ್ಲೆಗಳಿಗೆ ಹೆಸರಿಸುವ ಸಂದರ್ಭದಲ್ಲಿ ಯಾವ ಮಾನದಂಡವನ್ನು ಹಮ್ಮಿಕೊಳ್ಳಲಾಗಿತ್ತು ;

(ಇ) ಜಿಲ್ಲೆಗಳ ಹೆಸರುಗಳನ್ನು ಬದಲಾವಣೆಗೆ ಮಾಡುವಂತೆ ಯಾವುದಾದರೂ ಬೇಡಿಕೆಗಳು ಬಂದಿದೆಯೇ ; ಬಂದಿದ್ದರೆ, ಈ ಬಗ್ಗೆ ವಿವರಗಳನ್ನು ನೀಡುವುದು ;

(ಈ) ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಇರುವ ಜಿಲ್ಲೆ ಯಾವುದು ; ಹೊಸ ಜಿಲ್ಲೆಗಳನ್ನು ರಚಿಸುವ ಯೋಚನೆ ಸರ್ಕಾರದ ಮುಂದೆ ಇದೆಯೇ (ಇದ್ದರೆ ವಿವರ ನೀಡುವುದು) ?

## ಅಸಂಘಟಿತ ಕಾರ್ಮಿಕರು

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೬೯ (೧೮೫೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯಲ್ಲಿ ಒಟ್ಟು ಇರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; ಬೀಡಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ರಿಕ್ಷಾ ಚಾಲಕರು, ಬಸ್ಸು ನೌಕರರು, ಮೋಟಾರು ಚಾಲಕರ ಸಂಖ್ಯೆ ಎಷ್ಟು (ವಿವರ ನೀಡುವುದು) ;

(ಆ) ಅಸಂಘಟಿತ ಮೋಟಾರು ಚಾಲಕರಿಗೆ ಕಾರ್ಮಿಕ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ (ವಿವರಗಳನ್ನು ಒದಗಿಸುವುದು) ;

(ಇ) ಖಾಸಗಿಯಾಗಿ ಕೆಲಸ ನಿರ್ವಹಿಸುತ್ತಿರುವ ಚಾಲಕರಿಗೆ ವಿಮಾ ಯೋಜನೆ ಜಾರಿಗೆ ತರಲಾಗಿದೆಯೇ ; ಹಾಗಿದ್ದಲ್ಲಿ, ವಿವರ ನೀಡುವುದು ;

(ಈ) ಈವರೆಗೆ ಎಷ್ಟು ಜನರಿಗೆ ಈ ಯೋಜನೆಯ ಪ್ರಯೋಜನ ನೀಡಲಾಗಿದೆ (ವಿವರ ನೀಡುವುದು) ;

(ಉ) ನೌಕರರಿಗೂ, ಮಾಲೀಕರಿಗೂ ವಿವಾದ ಉಂಟಾಗಿದ್ದ ಸಂದರ್ಭದಲ್ಲಿ ಎಷ್ಟು ವಿವಾದಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಧಾನದ ಮೂಲಕ ಪರಿಹರಿಸಲಾಗಿದೆ (ಅಂಕಿ-ಅಂಶ ನೀಡುವುದು) ಪರಿಹಾರವಾಗದ ಪ್ರಕರಣಗಳು ಎಷ್ಟು (ವಿವರ ನೀಡುವುದು) ?

## ಕಾರ್ಮಿಕ ಇಲಾಖಾ ಕಛೇರಿಗೆ ಸ್ವಂತ ಕಟ್ಟಡ

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೧೪೭೦ (೧೮೫೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಗೆ ಸ್ವಂತ ಕಟ್ಟಡ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದರೆ ಯಾವ ಹಂತದಲ್ಲಿದೆ ;

(ಆ) ಪ್ರಸ್ತುತ ಯಾವ ಕಟ್ಟಡದ ಎಷ್ಟನೇ ಮಹಡಿಯಲ್ಲಿ ಈ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ;

(ಇ) ಜಿಲ್ಲೆಯಲ್ಲಿ ಎಷ್ಟು ಕಾರ್ಮಿಕ ಅಧಿಕಾರಿಗಳ ಹುದ್ದೆ ಇರುತ್ತವೆ ; ಎಷ್ಟು ಅಧಿಕಾರಿಯೇತರ ಹುದ್ದೆಗಳಿರುತ್ತವೆ ; ಖಾಲಿ ಇದ್ದರೆ ವಿವರ ನೀಡುವುದು ;

(ಈ) ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಮಿಕರ ಪರಿಹಾರ ಕಾಯ್ದೆ ಅನ್ವಯ ಪರಿಹಾರ ಕೇಳಿ ಬಂದ ಅರ್ಜಿಗಳು ಬಾಕಿ ಇವೆಯೇ ; ಎಷ್ಟು ಪ್ರಕರಣಗಳು, ಎಷ್ಟು ವರ್ಷದಿಂದ ಪರಿಹಾರ ನೀಡಲು ಬಾಕಿ ಇವೆ ; ಬಾಕಿ ಇರುವ ಪ್ರಕರಣಗಳ ವಿವರ ನೀಡುವುದು (ಅಂಕಿ ಅಂಶಗಳ ಸಮೇತ) ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಕರ್ನಾಟಕ ಗೇರು ಅಭಿವೃದ್ಧಿ ನಿಗಮ

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೧೪೭೧ (೧೮೫೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅರಣ್ಯ ಇಲಾಖೆಯಿಂದ ಕರ್ನಾಟಕ ಗೇರು ಅಭಿವೃದ್ಧಿ ನಿಗಮಕ್ಕೆ ಎಷ್ಟು ಎಕರೆ (ಹೆಕ್ಟೇರ್) ಜಮೀನನ್ನು ಲೀಸ್ ಆಧಾರದಲ್ಲಿ ಗೇರು ಅಭಿವೃದ್ಧಿಗಾಗಿ ನೀಡಲಾಗಿದೆ ; ಈ ಲೀಸ್‌ನಿಂದ ಅರಣ್ಯ ಇಲಾಖೆಗೆ ಎಷ್ಟು ಆದಾಯ ಬರುತ್ತಿದೆ ; ನಿಗಮದಿಂದ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಹಣವನ್ನು ಸಂದಾಯ ಮಾಡಿದೆಯೇ ; ಮಾಡಿದ್ದರೆ ಬಾಕಿ ಎಷ್ಟು ;

(ಆ) ರೈತರಿಗೆ ಉತ್ತಮ ತಳಿಯ ಗೇರು ತಳಿಗಳನ್ನು ನೀಡುವ ಬಗ್ಗೆ ನಿಗಮ ಕ್ರಮ ಕೈಗೊಂಡಿದೆಯೇ ;

(ಇ) ಗೇರು ಅಭಿವೃದ್ಧಿ ನಿಗಮದಿಂದ ನಡೆಸುತ್ತಿದ್ದ ಗೇರು ಫೆನ್ನಿ ಫ್ಯಾಕ್ಟರಿಯನ್ನು ನಡೆಸಲಾಗುತ್ತಿದೆಯೇ ;

(ಈ) ನಿಗಮದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಡುತೋಪು ಯೋಜನೆಯ ಬಗ್ಗೆ ಆದ ಅವ್ಯವಹಾರದ ಬಗ್ಗೆ ತನಿಖೆಯು ಯಾವ ಹಂತದಲ್ಲಿದೆ (ವಿವರ ನೀಡುವುದು) ;

(ಉ) ಗೇರು ಅಭಿವೃದ್ಧಿಗಾಗಿ ಕರಾವಳಿ ಪ್ರದೇಶದಲ್ಲಿ ಈ ನಿಗಮದಿಂದ ಕೈಗೊಂಡ ಯೋಜನೆಗಳ ಬಗ್ಗೆ ವಿವರ ನೀಡುವುದು ;

(ಊ) ಗೇರು ಅಭಿವೃದ್ಧಿ ನಿಗಮ ವಾರ್ಷಿಕವಾಗಿ ಎಷ್ಟು ಆದಾಯವನ್ನು ಗಳಿಸಿದೆ (ಯಾವ ಯಾವ ಮೂಲದಿಂದ ವಿವರ ನೀಡುವುದು) ?

## ಕೆರೆಗಳಿಗೆ ತುಂಬಿಸುವುದು : ಭದ್ರಾ ಜಲಾಶಯದ ಮೇಲ್ದಂಡೆ ಕಾಮಗಾರಿ ಅಪೂರ್ಣ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೪೭೨ (೧೮೪೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿತ್ರದುರ್ಗ ಜಿಲ್ಲೆಯ ವಿವಿಧ ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ಭದ್ರಾ ಜಲಾಶಯದಲ್ಲಿ ಮೇಲ್ದಂಡೆ ಕಾಮಗಾರಿಗಳನ್ನು ಯಾವಾಗ ಎತ್ತಿಕೊಳ್ಳಲಾಯಿತು (ವಿವರ ನೀಡುವುದು) ;

(ಆ) ಸದರಿ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು (ವಿವರ ನೀಡುವುದು) ;

(ಇ) ಇನ್ನೂ ಪೂರ್ಣಗೊಳ್ಳದಿರಲು ಕಾರಣವೇನು ; ಪೂರ್ಣಗೊಳ್ಳಲು ಯಾವ ರೀತಿಯ ಕ್ರಮಕೈಗೊಳ್ಳಲಾಗಿದೆ (ವಿವರ ನೀಡುವುದು) ?

## ಕೋಸ್ಟಲ್ ಜೋನ್ ಮ್ಯಾನೇಜ್‌ಮೆಂಟ್ ಪ್ಲಾನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೭೩ (೧೮೬೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ನಿಯಂತ್ರಣ ವಲಯ ೨೦೧೧ರ ನಿಯಮದಂತೆ ಗ್ರಾಮೀಣ ಪ್ರದೇಶದ ಕರಾವಳಿ ನಿಯಂತ್ರಣ ವಲಯ–೩ಕ್ಕೆ ಸಂಬಂಧಿಸಿದ ಜಿಲ್ಲಾ ಮಟ್ಟದ ಇಲಾಖೆ ಕೋಸ್ಟಲ್ ಜೋನ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ತಯಾರಿಸಲಾಗಿದೆಯೇ ;

(ಆ) ಸದರಿ ಪ್ಲಾನ್‌ನ್ನು ತಯಾರಿಸುವುದರಿಂದ ಗ್ರಾಮೀಣ ಪ್ರದೇಶದ ಕರಾವಳಿಯ ಸಮುದ್ರ ತೀರದ ಭರತ ರೇಖೆಯಿಂದ ೧೦೦ ಮೀಟರ್ ಒಳಗೆ ವಾಸವಾಗಿರುವ ಸಾಂಪ್ರದಾಯಿಕ ಮೀನುಗಾರರಿಗೆ ಅನುಕೂಲವಾಗುವುದೇ ;

(ಇ) ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸದರಿ ಪ್ಲಾನ್‌ನ್ನು ತಯಾರಿಸಲಾಗಿದೆ (ಜಿಲ್ಲಾವಾರು ತಾಲ್ಲೂಕುವಾರು ಪೂರ್ಣ ವಿವರ ನೀಡುವುದು) ;

(ಈ) ತಯಾರಿಸಲಾದ ಕೋಸ್ಟಲ್ ಜೋನ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯಲ್ಲಿ ಮಂಡಿಸಲಾಗಿದೆಯೇ ;

(ಉ) ಮಂಡಿಸಿದ್ದಲ್ಲಿ, ಎಷ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಡಿಸಲಾಗಿದೆ (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು) ?

## ಕರಾವಳಿ ನಿಯಂತ್ರಣ ವಲಯ ೩ರಲ್ಲಿ ವಾಸ್ತವ್ಯ ಉದ್ದೇಶಕ್ಕಾಗಿ ಮೀನುಗಾರರಿಗೆ ಮನೆ ಕಟ್ಟಲು ಅವಕಾಶ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೭೪ (೧೮೬೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ನಿಯಂತ್ರಣ ವಲಯ ೨೦೧೧ರ ನಿಯಮದಂತೆ ಕೇರಳ ಮತ್ತು ಗೋವಾ ರಾಜ್ಯದಲ್ಲಿ ಕರಾವಳಿ ನಿಯಂತ್ರಣ ವಲಯ ೩ರಲ್ಲಿ ವಾಸ್ತವ್ಯ ಉದ್ದೇಶಕ್ಕಾಗಿ ಮನೆ ಕಟ್ಟಲು ಭರತ

ರೇಖೆಯಿಂದ ೫೦ ಮೀಟರ್ ಒಳಗಡೆ ಸಾಂಪ್ರಾದಾಯಿಕ ಮೀನುಗಾರರಿಗೆ ಅವಕಾಶವನ್ನು ಕಲ್ಪಿಸಲಾಗಿದ್ದು, ರಾಜ್ಯದಲ್ಲೂ ಈ ನಿಯಮವನ್ನು ಅಳವಡಿಸಿಕೊಳ್ಳಲು ಇರುವ ತೊಂದರೆಯೇನು ;

(ಆ) ಸದರಿ ಯೋಜನೆಯ ನಿಯಮವನ್ನು ರಾಜ್ಯದಲ್ಲಿ ಪಾಲಿಸಲು ಸರ್ಕಾರ ಚಿಂತನೆ ಮಾಡಿದೆಯೇ ;

(ಇ) ಸದರಿ ನಿಯಮದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಪರಿಸರ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆಯೇ ;

(ಈ) ಸಲ್ಲಿಸಿದ್ದಲ್ಲಿ, ಇದು ಯಾವ ಹಂತದಲ್ಲಿದೆ (ಪೂರ್ಣ ವಿವರ ನೀಡುವುದು) ;

(ಉ) ಕೇರಳ ಮತ್ತು ಗೋವಾ ರಾಜ್ಯದ ಮಾದರಿಯನ್ನೇ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಯೇನು (ಪೂರ್ಣ ವಿವರ ನೀಡುವುದು) ?

## ಭಾಗ್ಯಲಕ್ಷ್ಮಿ ಯೋಜನೆ : ಕಡ್ಡಾಯ ವಿವಾಹ ನೋಂದಣಿ ಪ್ರಕ್ರಿಯೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೭೫ (೧೮೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಭಾಗ್ಯಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಕಡ್ಡಾಯ ವಿವಾಹ ನೋಂದಣಿ ಪ್ರಕ್ರಿಯೆ ಕುರಿತಂತೆ ಗ್ರಾಮ ಮಟ್ಟದಲ್ಲಿ ಯಾವ ಇಲಾಖೆಯ ಅಧಿಕಾರಿಗೆ ನೀಡಲಾಗಿದೆ ;

(ಆ) ಗ್ರಾಮ ಮಟ್ಟದ ಅಧಿಕಾರಿಗೆ ನೀಡಿದ್ದಲ್ಲಿ ಕಡ್ಡಾಯ ವಿವಾಹ ನೋಂದಣಿ ಪ್ರಕ್ರಿಯೆಯು ಎಷ್ಟು ದಿನಗಳ ಅವಧಿಯಲ್ಲಿ ನಿರ್ವಹಿಸಲಾಗುತ್ತದೆ ;

(ಇ) ಸಕಾಲ ಸೇವೆಯಲ್ಲಿ ಕಡ್ಡಾಯ ವಿವಾಹ ನೋಂದಣಿ ಸೇವೆಯನ್ನು ಸೇರಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಯೇನು ;

(ಈ) ಹಾಗಿದ್ದಲ್ಲಿ, ಸಕಾಲ ಸೇವೆಯಲ್ಲಿ ಕಡ್ಡಾಯ ವಿವಾಹ ನೋಂದಣಿಯನ್ನು ಸೇರಿಸಲು ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು) ?

## ಪೈಕಾ (ಗ್ರಾಮೀಣ ಕ್ರೀಡಾ) ಯೋಜನೆ ಅನುಷ್ಠಾನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೭೬ (೧೮೪೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಯುವಜನ ಮತ್ತು ಕ್ರೀಡಾ ಇಲಾಖೆಯ ಮೂಲಕ ಪೈಕಾ (ಗ್ರಾಮೀಣ ಕ್ರೀಡಾ) ಯೋಜನೆಯು ಅನುಷ್ಠಾನಗೊಂಡಿದೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಕಳೆದ ಮೂರು ವರ್ಷಗಳಲ್ಲಿ ಪೈಕಾ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳಾವುವು (ಕಾಮಗಾರಿವಾರುಗಳ ಹೆಸರನ್ನು ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಅನುಷ್ಠಾನಗೊಂಡಿರುವ ಕಾಮಗಾರಿಗಳು ಯಾವ ಹಂತದಲ್ಲಿವೆ (ಜಿಲ್ಲಾವಾರು ವಿವರ ನೀಡುವುದು) ;

(ಈ) ಅನುಮೋದನೆಗೊಂಡ ಕಾಮಗಾರಿಯನ್ನು ಅನುಷ್ಠಾನಗೊಂಡ ಮತ್ತು ಅನುಷ್ಠಾನಗೊಳ್ಳದ ಕಾಮಗಾರಿಗಳು ಯಾವುವು (ಜಿಲ್ಲಾವಾರು, ಕಾಮಗಾರಿಗಳ ಪೂರ್ಣ ಪಟ್ಟಿಯನ್ನು ನೀಡುವುದು) ;

(ಉ) ಅನುಮೋದನೆಗೊಂಡು ಅನುಷ್ಠಾನಗೊಳ್ಳದೇ ಇರಲು ಕಾರಣವೇನು ; ಅನುಷ್ಠಾನಗೊಳ್ಳದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು (ಪೂರ್ಣ ವಿವರ ನೀಡುವುದು) ?

## ಬಾಲ ಕಾರ್ಮಿಕ ಪದ್ಧತಿ ಬಗ್ಗೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೭೭ (೧೮೫೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬಾಲ ಕಾರ್ಮಿಕ ಪದ್ಧತಿ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಪದ್ಧತಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಈ ಭಾಗದಲ್ಲಿ ಬಾಲ ಕಾರ್ಮಿಕರು ಇನ್ನೂ ಜೀತಪದ್ಧತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ದಾಂಡೇಲಿಯ ಕಾಳಿನದಿಯಲ್ಲಿ ಮೊಸಳೆಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೭೮ (೧೮೫೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿ ಹಾರ್ನ್‌ಬಿಲ್ ಹಕ್ಕಿಗೊಸ್ಕರ ಯಾವ ಯೋಜನೆ ಕೈಗೊಳ್ಳಲಾಗಿದೆ ;

(ಆ) ದಾಂಡೇಲಿ ನಗರದಲ್ಲಿ ಹರಿಯುವ ಕಾಳಿನದಿಯಲ್ಲಿ ಎಷ್ಟು ಮೊಸಳೆಗಳು ವಾಸವಾಗಿವೆ ; ವನ್ಯಜೀವಿ ವಿಭಾಗ ಇವುಗಳ ರಕ್ಷಣೆಗಾಗಿ ಯಾವ ಸುರಕ್ಷತಾ ಕ್ರಮಗಳನ್ನು ಕೈಗೊಂಡಿದೆ (ವಿವರ ನೀಡುವುದು) ;

(ಇ) ದಾಂಡೇಲಿಯ ವನ್ಯಜೀವಿ ವಿಭಾಗದ ಅನುಮೋದಿತ ನಕ್ಷೆ ಒದಗಿಸುವುದು ;

(ಈ) ದಾಂಡೇಲಿ ಅಭಯಾರಣ್ಯದ ವ್ಯಾಪ್ತಿಯ ಅನುಮೋದಿತ ನಕ್ಷೆ ಒದಗಿಸುವುದು ;

(ಉ) ಹಾರ್ನ್‌ಬಿಲ್ ಹಕ್ಕಿಗಾಗಿ ಕೈಗೊಂಡಿರುವ ಯೋಜನೆ ಹಾಗೂ ಈ ಕಾರ್ಯಕ್ರಮಗಳಿಗಾಗಿ ಬಿಡುಗಡೆಯಾದ ಅನುದಾನವೆಷ್ಟು ;

(ಊ) ದಾಂಡೇಲಿ ಮೊಸಳೆ ಪಾರ್ಕಿಗಾಗಿ ಮಂಜೂರಾದ ಅನುದಾನವೆಷ್ಟು (ಈ ಅನುದಾನದ ಬಳಕೆಯ ಕುರಿತು ವಿವರ ನೀಡುವುದು) ?

## ದಾಂಡೇಲಿ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೯ (೧೮೫೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ನಗರದಲ್ಲಿರುವ ದಿ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಯ ಮೇಲೆ ದಿನಾಂಕ : ೦೧–೧೨–೨೦೧೧ರಂದು ಹುಬ್ಬಳ್ಳಿಯಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಫ್ಯಾಕ್ಟರೀಸ್ ಇವರು ಯಾವ ನ್ಯೂನತೆಗಾಗಿ ಸದರಿ ಕಾರ್ಖಾನೆಯ ಅನುಭವದಾರರ ಮೇಲೆ ಹಾಗೂ ಫ್ಯಾಕ್ಟರಿ ಮ್ಯಾನೇಜರ್‌ರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ;

(ಆ) ಯಾವ ಯಾವ ನ್ಯೂನತೆಗಳನ್ನು ಸದರಿಯವರು ಗುರುತಿಸಿರುತ್ತಾರೆ ; ದಾಂಡೇಲಿ ಜೆ.ಎಂ.ಎಫ್.ಸಿ. ಯಲ್ಲಿ ಪ್ರಕರಣ ಯಾವ ಹಂತದಲ್ಲಿದೆ ;

(ಇ) ಕಾರ್ಖಾನೆಯ ಆಪಾದಿತರ ಮೇಲೆ ಏತಕ್ಕಾಗಿ ಕ್ರಮ ಜರುಗಿಸಲಾಗಿಲ್ಲ ?

## ದಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನ ಉಷ್ಣಸ್ಥಾವರಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೮೦ (೧೮೫೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕನ್ನಡ ಜಿಲ್ಲೆಯು ದಾಂಡೇಲಿ ನಗರದಲ್ಲಿರುವ ದಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನಲ್ಲಿ ಯಾವ ಯಾವ ವರ್ಷಗಳಲ್ಲಿ ಎಷ್ಟು ಪ್ರತ್ಯೇಕ ಉಷ್ಣಸ್ಥಾವರಗಳನ್ನು ಸ್ಥಾಪಿಸಲಾಗಿದೆ ;

(ಆ) ಉಷ್ಣ ಸ್ಥಾವರಗಳು ಸುಸ್ಥಿತಿಯಲ್ಲಿವೆಯೇ ; ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದೆ ;

(ಇ) ಉಷ್ಣ ಸ್ಥಾವರಗಳನ್ನು ನಡೆಸಲು ಬಳಸುವ ಕಚ್ಚಾವಸ್ತು ಯಾವುವು ; ಪ್ರತಿ ದಿನಕ್ಕೆ ಎಷ್ಟು ಟನ್ ಕಚ್ಚಾ ವಸ್ತು ಸುಡಲಾಗುತ್ತಿದೆ ; ಎಷ್ಟು ಪ್ರಮಾಣದ ಹೊಗೆ, ಧೂಳು ಪ್ರತಿ ನಿತ್ಯ ಹೊರಹೊಮ್ಮುತ್ತಿದೆ ; ಹಾರು ಬೂದಿಯ ಉತ್ಪಾದನೆ ಎಷ್ಟು ;

(ಈ) ಪಶ್ಚಿಮ ಘಟ್ಟದಲ್ಲಿ ಉಷ್ಣಸ್ಥಾವರ ಸ್ಥಾಪಿಸಲು ಯಾವ ಯಾವ ಇಲಾಖೆಗಳು ಒಪ್ಪಿಗೆ ನೀಡಿರುತ್ತವೆ (ಅವುಗಳ ವಿವರ ನೀಡುವುದು) ?

## ಜವಳಿ ಇಲಾಖೆಯಲ್ಲಿನ ವಸತಿ ಯೋಜನೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೮೧ (೧೮೩೯) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜವಳಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ವಸತಿ ಸೌಲಭ್ಯ ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ (ವಿವರಗಳನ್ನು ನೀಡುವುದು) ;

(ಆ) ಇವುಗಳಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಅನರ್ಹಗೊಳಿಸಲಾಗಿದೆ ; ಅದಕ್ಕೆ ಕಾರಣಗಳೇನು (ಅನರ್ಹಗೊಂಡವರ ವಿವರಗಳನ್ನು ನೀಡುವುದು) ;

(ಇ) ಸರ್ಕಾರ ಸದರಿ ಯೋಜನೆಗೆ ಸದರಿ ಅವಧಿಯಲ್ಲಿ ಎರಡೂ ಜಿಲ್ಲೆಗಳಿಗೆ ಮಂಜೂರು ಮಾಡಲಾದ ಅನುದಾನ ಎಷ್ಟು ;

(ಈ) ಇಲಾಖೆಯವರು ನಿಗದಿತ ಗುರಿಯನ್ನು ಸಾಧಿಸಿದ್ದಾರೆಯೇ ; ಇಲ್ಲವಾದಲ್ಲಿ ಕಾರಣವೇನು ?

**ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜವಳಿ ಪಾರ್ಕ್ ನಿರ್ಮಾಣ**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೮೨ (೧೮೪೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದ್ರಾಬಾದ್ ಕರ್ನಾಟಕದ ಯಾವ ಭಾಗದಲ್ಲಿ ಜವಳಿ ಪಾರ್ಕ್ ನಿರ್ಮಿಸಲು ಸರ್ಕಾರ ಚಿಂತನೆ ನಡೆಸಿದೆ ;

(ಆ) ಹೈದ್ರಾಬಾದ್ ಕರ್ನಾಟಕದ ಯಾವ ಭಾಗದಲ್ಲಿ ಜವಳಿ ಉದ್ದಿಮೆ ಇರುವುದು ;

(ಇ) ಕೊಪ್ಪಳ ಜಿಲ್ಲೆಯಲ್ಲಿ ನೇಕಾರಿಕೆಯನ್ನು ಅವಲಂಭಿಸಿದ ಎಷ್ಟು ಕುಟುಂಬಗಳು ಇವೆ ;

(ಈ) ಸದರಿ ಕುಟುಂಬಗಳಿಗೆ ಇಲಾಖೆಯವರು ನೀಡಿದ ಯೋಜನೆಗಳು ಯಾವುವು (ವಿವರಗಳನ್ನು ನೀಡುವುದು) ;

(ಉ) ಸುವರ್ಣ ವಸ್ತ್ರ ನೀತಿ ೨೦೦೮-೧೩ರ ಯೋಜನೆಯಡಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ (ವಿವರಗಳನ್ನು ನೀಡುವುದು) ?

**ಅರಣ್ಯ ಇಲಾಖೆಯ ಕಟ್ಟಡದ ನವೀಕರಣದಲ್ಲಿ ಅವ್ಯವಹಾರ**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೪೮೩ (೧೮೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆನರಾ ವೃತ್ತ, ಹಳಿಯಾಳ ವಿಭಾಗದ ಅರಣ್ಯ ಇಲಾಖೆಯಲ್ಲಿ ವಿಭಾಗೀಯ ಕಛೇರಿ ನವೀಕರಣಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ; ಯಾವ ವರ್ಷದ ಅವಧಿಗೆ ಅನುಮತಿ ನೀಡಿರುತ್ತಾರೆ ; ನವೀಕರಣ ಕೆಲಸ ಮಂಜೂರಿ ನೀಡಿದ ಅಧಿಕಾರಿ ಯಾರು ; ನಿಯಮದಂತೆ ವಿವರಣೆಯೊಂದಿಗೆ ವರದಿ ನೀಡುವುದು ;

(ಆ) ಸದರಿ ಕಛೇರಿ ನವೀಕರಣಕ್ಕಾಗಿ ಅಗತ್ಯಕ್ಕಿಂತ ಹೆಚ್ಚಿಗೆ ಅನುದಾನದ ಬಳಕೆ ಮಾಡಿಕೊಂಡಿರುತ್ತಾರೆಂದು ತಿಳಿದು ಬಂದಿದ್ದು, ಇದರ ತಪಾಸಣೆ ಮಾಡಿ ಎಮ್.ಬಿ. ಬರೆದ ಅಧಿಕಾರಿ ಯಾರು (ಚೆಕ್ ಮೇಜರ್‌ಮೆಂಟ್) (ವರದಿಯ ವಿವರ ನೀಡುವುದು) ; ಸದರಿ ನವೀಕರಣದ ಅಂದಾಜು ಪತ್ರಿಕೆ ಹಾಗೂ ಎಮ್.ಬಿ. ಬರೆದ ವಿವರದ ಪ್ರತಿ ನೀಡುವುದು ;

(ಇ) ೨೦೧೨-೧೩, ೨೦೧೩-೨೦೧೪ನೇ ಸಾಲಿನಲ್ಲಿ ಇದೇ ಕಾರ್ಯಾಲಯಕ್ಕೆ ಎಷ್ಟು ಲಕ್ಷ ರೂಪಾಯಿ ಅನುದಾನದ

ಉಪಕರಣಗಳನ್ನು ಖರೀದಿಸಿರುತ್ತಾರೆ (ವಿವರ ನೀಡುವುದು) ; ಸದರಿ ಉಪಕರಣಗಳ ಖರೀದಿ ಮಾಡಿರುವುದರಲ್ಲಿಯೂ ಕೂಡಾ ಅವ್ಯವಹಾರ ಆಗಿರುವುದು ನಿಜವೇ (ಈ ಬಗ್ಗೆ ಉಪಕರಣಗಳ ಖರೀದಿಯ ಮಂಜೂರಿ ಆದೇಶದ ಪ್ರತಿಯೊಂದಿಗೆ ಹಾಗೂ ರಶೀದಿಯೊಂದಿಗೆ ವಿವರ ನೀಡುವುದು) ?

## ಕಾಳಿ ನದಿ ನೀರಾವರಿ ಯೋಜನೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :–

೧೪೮೪ (೧೮೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕಾಳಿ ನದಿ ನೀರಾವರಿ ಯೋಜನೆ ಈ ಹಿಂದಿನ ಬಜೆಟ್‌ನಲ್ಲಿ ಮಂಡನೆಯಾಗಿದ್ದರೂ ಕೂಡಾ ಇಲ್ಲಿಯವರೆಗೆ ಕಾರ್ಯಗತವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) ;

(ಆ) ಈಗಾಗಲೇ ಸದರಿ ಯೋಜನೆಯಿಂದ ತಾಲ್ಲೂಕಿನ ಬಹಳಷ್ಟು ರೈತರಿಗೆ ಅನುಕೂಲವಾಗುವ ಹಂತದಲ್ಲಿರುವಾಗ ಇಲ್ಲಿಯವರೆಗೆ ಈ ಯೋಜನೆ ಕಾರ್ಯಗತವಾಗದೆ ಇಲ್ಲಿಯ ಸಮಸ್ತ ರೈತರಿಗೆ

ಬಹಳಷ್ಟು ತೊಂದರೆಯಾಗಿರುವುದರಿಂದ ಕೂಡಲೇ ಸರ್ಕಾರ ಈ ಯೋಜನೆಯನ್ನು ಪ್ರಾರಂಭಿಸಿ, ರೈತರಿಗೆ ಅನುಕೂಲ ಮಾಡಿಕೊಡಲು ಎಷ್ಟು ಕಾಲಾವಕಾಶ ಬೇಕಾಗಿರುತ್ತದೆ (ವಿವರ ನೀಡುವುದು) ?

ವಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂಗಳೂರು-59/ಕಾ.ಸೂ. 0 3390/ 1000 ಪ್ರತಿಗಳು/19-7-14